ಸಾಕ್ಷಿಯನ್ನು ದಿಃ 06.12.2019 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಡಿಆರ್ ವಕೀಲರಿಂದ ಃ-

ನಾನು 1994 ರಲ್ಲಿ ಗ್ಲೋಬಲ್ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದೇನೆ. ನನಗೂ ಮತ್ತು ಸದರಿ ಕಂಪನಿಗೆ ಕೆಲಸದ ಸಂಬಂಧವಾಗಿ ತಕರಾರು ಬಂದಿದ್ದರಿಂದ ನನ್ನನ್ನು ಸದರಿ ಕಂಪನಿಯಿಂದ ತೆಗೆದುಹಾಕಿರುತ್ತಾರೆ. ಈ ಬಗ್ಗೆ ನನಗೆ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ. ನಾನು ಕೆಲಸ ಬಿಟ್ಟ ನಂತರ ಸದರಿ ಕಂಪನಿಯ ಜೊತೆ ಇಮೇಲ್ ವ್ಯವಹಾರ ಮಾಡಿದ್ದೇನೆ. ಸದರಿ ಕಂಪನಿಯಲ್ಲಿ ಪುನಃ ಕೆಲಸಕ್ಕೆ ಸೇರಿದ ನಂತರ ಸಂಬಳ ಸರಿಯಾಗಿ ಕೊಡುತ್ತಿರಲಿಲ್ಲ ಎಂದರೆ ಸರಿ. ನಮಗೆ ಸಂಬಂಧಪಟ್ಟ ಎಲ್ಲಾ ಸಂಬಳ ಐಸಿಐಸಿಐ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿತ್ತು ಎಂದರೆ ಸರಿ. ನಮ್ಮ ಕಂಪನಿಯಲ್ಲಿ ಎಲ್ಲಾ ಕಂಪ್ಯೂಟರ್‌ಗಳಿಗೂ ಮತ್ತು ಎಲ್ಲಾ ಸಿಬ್ಬಂದಿಗೂ ಅಕ್ಸೆಸ್ ಇತ್ತು ಎಂದರೆ ಸರಿ. ನಮಗೆ ಸಂಬಂಧಪಟ್ಟ ಇಮೇಲ್‌ಗಳನ್ನು ನಾವು ಮಾತ್ರ ತೆರೆಯಬಹುದು ಎಂದರೆ ಸರಿ. ಸದರಿ ಕಂಪನಿಯಲ್ಲಿ ನಾನು ಕೆಲಸ ಮಾಡುವ ಸಮಯದಲ್ಲಿ ಒಂದು ಕಂಪ್ಯೂಟರ್ ಬೆಲೆ ಎಷ್ಟು ಎಂದು ನನಗೆ ಹೇಳಲು ಆಗುವುದಿಲ್ಲ. ಒಂದು ಕಂಪ್ಯೂಟರ್‌ನಲ್ಲಿ ಯಾವುದೇ ಒಂದು ಸಾಫ್ಟ್‌ವೇರ್ ಇನ್‌ಸ್ಟಾಲ್ ಮಾಡಿದ್ದರೆ ಅದನ್ನು ಬೇರೆ ಯಾರು ಕಾಪಿ ಮಾಡಲು ಬರುವುದಿಲ್ಲವೆಂದರೆ ಸರಿ. ಸದರಿ ಕಂಪನಿಯ ಡೈರೆಕ್ಟರ್‌ಗಳ ಪ್ರೊಫೈಲ್‌ಗಳು ಸಾಮಾಜಿಕ ಜಾಲತಾಣದಲ್ಲಿ ನೋಡಬಹುದು ಎಂದರೆ ಸರಿ. 2012 ರಿಂದ 2015 ವರೆಗೆ ಕಂಪನಿಯ ಪ್ರಾಜೆಕ್ಟ್‌ಗಳ ಬಗ್ಗೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಸದರಿ ಕಂಪನಿಯಲ್ಲಿ ಚಾಸಾ.1, ಅವರ ಹೆಂಡತಿ, ಬ್ರಿನಾಲ್ ಸಿಂಗ್ ಮತ್ತು ಮೈಕಲ್ ಸ್ಯಾಮ್ಯುಯಲ್ ಎಂಬುವರು ಡೈರೆಕ್ಟರ್ ಆಗಿದ್ದರು ಎಂದರೆ ಸರಿ. 2012

ರಿಂದ ನಂತರ ಸದರಿ ಕಂಪನಿಯ ಸಿಬ್ಬಂದಿಯವರು ಸಂಬಳ ಸರಿಯಾಗಿ ಕೊಡದೇ ಇದುದ್ದರಿಂದ ಎಲ್ಲರೂ ರಾಜಿನಾಮೆ ಕೊಡಬೇಕೆಂದು ತೀರ್ಮಾನ ಮಾಡಿದ್ದರು ಎಂಬ ವಿಷಯ ನನಗೆ ಗೊತ್ತಿಲ್ಲ, ಕಾರಣ ಆ ಸಮಯದಲ್ಲಿ ನಾನು ಕಂಪನಿಗೆ ಪುನಃ ಸೇರಿಕೊಂಡಿದ್ದೆ ಮತ್ತು ಸದರಿ ತೀರ್ಮಾನ ನಾನು ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಆಗಿರುವ ಘಟನೆ. ಮೇಲೆ ತಿಳಿಸಿದ ಬೃಣಾಲ್ ಸಿಂಗ್‌ರವರಿಗೆ ಕಂಪ್ಯೂಟರ್ ಮತ್ತು ವ್ಯವಹಾರದ ಬಗ್ಗೆ ಯಾವುದೇ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೂ ಮತ್ತು ನನಗೂ ಯಾವುದೇ ಜಾಸ್ತಿ ಮಾತುಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಕಂಪನಿಯಲ್ಲಿ ಕೆಲಸ ಮಾಡುವ ಸಮಯದಲ್ಲಿ 1 ರಿಂದ 3ನೇ ಆರೋಪಿಗಳಿಗೆ ಜುಲೈ 2012 ರಿಂದ ಫೆಬ್ರವರಿ 2013 ರಲ್ಲಿ ಮುಂಬಡ್ತಿ ಸಿಕ್ಕಿತ್ತು ಎಂದರೆ ಸರಿ. ನಾನು ಕೆಲಸ ಮಾಡುವ ಸಮಯದಲ್ಲಿ 1ನೇ ಆರೋಪಿಗೆ ಬೆಸ್ಟ್ ಎಂಪ್ಲಾಯಿ ಎಂಬ ಅವಾರ್ಡ್ ಕೊಟ್ಟಿರುವ ವಿಷಯ ನನಗೆ ಗೊತ್ತಿಲ್ಲ. ಸದರಿ ಕಂಪನಿಗೆ ಜಿ.ಆರ್.ವೆಂಕಟೇಶ್‌ನವರು ಬೃಣಾಲ್ ಸಿಂಗ್ ಇದ್ದಾಗ ಆಗಾಗ ಬರುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸದರಿ ಕಂಪನಿಯಲ್ಲಿ ಎನ್‌ಕ್ವೈರಿ ನಡೆಯುತ್ತಿತ್ತು ಎಂಬ ವಿಷಯ ನನಗೆ ಗೊತ್ತಿತ್ತು. ಸದರಿ ಎನ್‌ಕ್ವೈರಿಯನ್ನು ಪ್ರಾಸಾ.1ರವರು ನಡೆಸುತ್ತಿದ್ದರು. ಸದರಿ ಎನ್‌ಕ್ವೈರಿಗೆ ನನ್ನನ್ನು ಸಾಕ್ಷಿಯಾಗಿ ಕರೆದಿರುವುದಿಲ್ಲ. ಸದರಿ ಎನ್‌ಕ್ವೈರಿಯಲ್ಲಿ ಆರೋಪಿಗಳು ದುರುಪಯೋಗಪಡಿಸಿಕೊಂಡ ಬಗ್ಗೆ ಆರೋಪ ಇತ್ತು. ಈ ಬಗ್ಗೆ ನಾನು ನಮ್ಮ ಸಿಬ್ಬಂದಿಯವರಿಂದ ತಿಳಿದಿರುತ್ತೇನೆ. ಸದರಿ ಕಂಪನಿಯಲ್ಲಿ 2012-2013 ರಲ್ಲಿ ಸುಮಾರು 60 ಜನ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದರು. ಸದರಿ ಎನ್‌ಕ್ವೈರಿ ನಾಲ್ಕು ಜನರ ವಿರುದ್ಧ ನಡೆಯುತ್ತಿತ್ತು. ಸದರಿ ಎನ್‌ಕ್ವೈರಿ ಬಗ್ಗೆ ಬೃಣಾಲ್‌ಸಿಂಗ್‌ರವರೇ ನನಗೆ ತಿಳಿಸಿರುತ್ತಾರೆ. ಇಬ್ಬರು ಪೊಲೀಸ್ ಅಧಿಕಾರಿಗಳು ನಮ್ಮ ಕಂಪನಿಗೆ ಬಂದಿರುತ್ತಾರೆ. ಆ ಸಂದರ್ಭದಲ್ಲಿ

ಎಲ್ಲೆಲ್ಲಿ ಆರೋಪಿಗಳು ಕುಳಿತುಕೊಳ್ಳುತ್ತಿದ್ದರು ಎಂಬ ವಿಷಯವನ್ನು ಕೇಳಿರುತ್ತಾರೆ. ಪೊಲೀಸ್‌ನವರು ನಮ್ಮ ಕಂಪನಿಗೆ ಒಂದು ಸಾರಿ ಬಂದಿರುತ್ತಾರೆ.

ಮರುವಿಚಾರಣೆ: ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ